ಮುಳುಗಿಸಿ ವಿದ್ಯುಚ್ಛಕ್ತಿಯನ್ನು ಮಾಡಿದರೆ ಅದಕ್ಕೆ ಏನು ಅರ್ಥ ಇದೆ?

ಉಪಾಧ್ಯಕ್ಷರು: ತಾವು ಇದನ್ನು ಇಲ್ಲಿಗೆ ಮುಕ್ತಾಯ ಮಾಡಿ.

ವಿಷಯ: ಹೇಮಾವತಿ ನಾಲಾ ಯೋಜನೆಗೆ ಭೂಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರ.

206 (1323)

ಶ್ರೀ ಶಿವಣ್ಣ (ತುಮಕೂರು): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ನಾಲಾ ಯೋಜನೆಗೆ ಭೂಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರವನ್ನು ನಿಗಧಿತ ಅವಧಿಯಲ್ಲಿ ಒದಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ತುಮಕೂರು ವಿಭಾಗದಲ್ಲಿರುವ ಇಂತಹ ಪ್ರಕರಣಗಳೆಷ್ಟು, ಹಾಗೂ ಇದರ ಮೊತ್ತವೆಷ್ಟು?

ಶ್ರೀ ಕೆ.ಎನ್.ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ಭೂ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಅವಾರ್ಡ್ ಪಾಸ್ ಆದ ನಂತರ ಆಯಾ ವರ್ಷದ ಅನುದಾನದಲ್ಲಿ ಭೂ ಸ್ವಾಧೀನಕ್ಕಾಗಿ ನಿಗಧಿಗೊಳಿಸಿದ ಅನುದಾನಕ್ಕೆ ಅನುಗುಣವಾಗಿ ಪರಿಹಾರವನ್ನು ಪಾವತಿಸಲಾಗುತ್ತಿದೆ.

ಆ) ಹೇಮಾವತಿ ನಾಲೆವಲಯ ತುಮಕೂರಿನ ವ್ಯಾಪ್ತಿಯಲ್ಲಿ ದಿನಾಂಕ 31-3-98ಕ್ಕೆ ಭೂ ಸ್ವಾಧೀನ ಪರಿಹಾರ ಪಾವತಿಸುವಂತಹ ಪ್ರಕರಣಗಳು 2073 ಇದ್ದು, ಪಾವತಿಸಬೇಕಿರುವ ಪರಿಹಾರದ ಮೊತ್ತ ರೂ. 3,87,55,499-00 ಇದರಲ್ಲಿ ತುಮಕೂರು ವಿಭಾಗಕ್ಕೆ ಸಂಬಂಧಿಸಿದಂತೆ 371 ಪ್ರಕರಣಗಳು ಇದ್ದು ಪರಿಹಾರದ ಮೊತ್ತ ರೂ.40,34,450-00 ಇರುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಶ್ರೀ ಎಸ್.ಶಿವಣ್ಣನವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ತಾವು ಎಷ್ಟನೆ ವರ್ಷದಿಂದ 1998ರವರೆಗೆ ಇಷ್ಟು ಪರಿಹಾರವನ್ನು ಕೊಡಬೇಕಾಗಿದ್ದು ಬಾಕಿ ಇತ್ತು. ಇದರಲ್ಲಿ ಭಾಗಶಃ ಎಷ್ಟು ಜನರಿಗೆ ಪರಿಹಾರವನ್ನು ಕೊಟ್ಟಿದ್ದೀರಿ? ತಾವು ಭಾಗಶಃ ಎಷ್ಟು ಜನರಿಗೆ ಪರಿಹಾರವನ್ನು ಕೊಡಬೇಕೆಂದು ಆಲೋಚನೆಯನ್ನು ಮಾಡಿದ್ದೀರಿ? ನೀವು ಈ ಪರಿಹಾರವನ್ನು ಕೊಡುವುದಕ್ಕೆ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಡುವುದಕ್ಕೂ ಏನು ಸಂಬಂಧವೆಂದು

ಕೇಳಬಯಸುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೆ, ತುಮಕೂರು ಜೋನ್‌ನಲ್ಲಿ ಕೆನಾಲ್ ಜೋನ್‌ಗೆ ಇಷ್ಟು ಹಣವೆಂದು ಇಟ್ಟಿರುತ್ತೇವೆ. ಆ ಹಣದಲ್ಲಿ ಭೂ ಸ್ವಾಧೀನ ಕೆಲಸ ಮತ್ತು ಸಿವಿಲ್ ವರ್ಕ್ ಆಗಬೇಕೆಂದು ನಮ್ಮಲ್ಲಿ ಇರುವಂತಹ ನಿಯಮವಾಗಿದೆ. ಆ ಪ್ರೊಸೀಜರ್‌ನಲ್ಲಿ ಈ ಸಾರಿ ಏನು ಹೇಳಿದ್ದೆವೆಂದರೆ before paying the contractor's bill amount, Land acquisiton bill must be cleared first ಎಂದು ನಾವು ಸ್ಪಷ್ಟವಾಗಿ ಗೌವರ್ನಮೆಂಟ್ ಡೈರಕ್ಷನ್ ಕೊಟ್ಟಿದ್ದೇವೆ. ನಾವು ಇಲ್ಲಿಯವರೆಗೆ ನಾವು ತುಮಕೂರು ಜೋನ್‌ನಲ್ಲಿ 7,754 ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಂಡು 34 ಕೋಟಿ 24 ಲಕ್ಷ ಎಸ್ಟಿಮೇಟ್ ಮಾಡಿದ್ದೇವೆ. ನಾವು ಕೊಟ್ಟಿರುವಂತಹ ಹಣ ಇಲ್ಲಿಯವರೆಗೆ 15 ಕೋಟಿ 47 ಲಕ್ಷ ರೂಪಾಯಿಗಳು ಆಗಿದೆ. ಭೂಮಿಯನ್ನು ಸ್ವಾಧೀನ ಮಾಡಿಕೊಂಡು ಪೊಸಿಷನ್‌ಗೆ ತೆಗೆದುಕೊಂಡಿರುವಂತಹ ಲ್ಯಾಂಡ್ 2,805 ಎಕರೆಯಾಗಿದೆ. ಇನ್ನು ಬಾಕಿ ಕೊಡಬೇಕಾಗಿರುವಂಥ ಹಣ ಒಟ್ಟು 3 ಕೋಟಿ 85 ಲಕ್ಷ ರೂಪಾಯಿಗಳನ್ನು ರೈತರಿಗೆ ಕೊಡಬೇಕಾಗಿದೆ. ಇವತ್ತೇ ಎಲ್.ಒ.ಸಿ ಬಿಡುಗಡೆಯಾಗುತ್ತದೆ. ಇದು ಬಿಡುಗಡೆಯಾಗಿ ಹಣ ಬಂದ ಮೇಲೆ ಬಿಲ್‌ಗಳು ಬಂದಹಾಗೆ ಆಯಾ ಗ್ರಾಂಟ್‌ಗಳನ್ನು ಅವಲಿಬಿಟಿಯ ಮೇಲೆ ಇನ್ನು ಕೇವಲ ಉಳಿದಿರುವಂತಹ 2073 ಪ್ರಕರಣಗಳಲ್ಲಿ 377 ಪ್ರಕರಣಗಳಿಗೆ ಕೂಡಲೇ 385ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ರೈತರಿಗೆ ಕೊಡುವಂಥಾದ್ದಕ್ಕೆ ಆದೇಶವನ್ನು ಮಾಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಇದು ಯಾವ ಸಾಲಿನಿಂದ ಬಾಕಿ ನಿಂತಿದೆ? ಅದಕ್ಕೆ ಏನಾದರೂ ತಾವು ಬಡ್ಡಿಯನ್ನು ಕೊಡುತ್ತೀರಾ? ಈ ಸರ್ಕಾರಕ್ಕೆ ಗೌರವ, ಘನತೆ ಏನಾದರೂ ಇದೆಯಾ? ಇದನ್ನು 10-12 ವರ್ಷಗಳಿಂದ ಭೂ ಸ್ವಾದೀನ ಮಾಡಿಕೊಂಡು ಪರಿಹಾರವನ್ನು ಕೊಡಲಿಲ್ಲವೆಂದರೆ ನೀವು ಎಲ್.ಓ.ಸಿ ಇಲ್ಲ. ಅದಕ್ಕೆ ಅವರಿಗೆ ಪರಿಹಾರವನ್ನು ಕೊಡುವುದಕ್ಕೆ ಮಾರ್ಗಸೂಚಿಯನ್ನು ಅನುಸರಿಸುತ್ತೇವೆಂದರೆ ಯಾರಾದರೂ ಇದನ್ನು ಸರ್ಕಾರವೆಂದು ಹೇಳುತ್ತಾರಾ? ನಿಮಗೆ ಬೇಕಾದ ಕಡೆಗಳಲ್ಲಿ ಯಾರೋ ಭೂ ಸ್ವಾಧೀನಕ್ಕೆ ಲ್ಯಾಂಡ್ ಬಿಟ್ಟು ಕೊಡಲಿಲ್ಲವೆಂದರೆ ಎಂಟ್ರಸ್ಟ್‌ಮೆಂಟ್ ವರ್ಕ್ ಮಾಡಿಕೊಂಡು ಕೋಟಿ ಗಟ್ಟಲೆ ಹಣವನ್ನು ಮಾಡಿಕೊಂಡು ಲೂಟಿ ಮಾಡುತ್ತೀರಿ? ಇಲ್ಲಿ ರೈತರು ಮರ್ಯಾದೆಯಾಗಿ ಜಮೀನನ್ನು ಬಿಟ್ಟು ಕೊಟ್ಟು ಪರಿಹಾರವನ್ನು ಕೊಡಿ ಎಂದರೆ ನೀವು ವಾದ ಮಾಡಿಕೊಂಡು ನಿಂತರೆ ಹೇಗೆ?

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಅಧ್ಯಕ್ಷರೆ, ನಾವು 10 ವರ್ಷಗಳಿಂದ ಇದನ್ನು ಉಳಿಸಿಕೊಂಡಿಲ್ಲ. ಇದು ದಿ: 1-4-98ರಿಂದ ಇರುವಂತಹ ಬಾಕಿಯಾಗಿದೆ. ಇದಕ್ಕೂ ಹಿಂದೆ ಇರುವಂಥಾದ್ದನ್ನು ಪೇಮೆಂಟ್ ಮಾಡಿಕೊಂಡು ಬಂದಿದ್ದೇವೆ. ನಾವು ಇಡೀ

ರಾಜ್ಯದಲ್ಲಿ ಒಂದು ಹೊಸ ಸರ್ಕ್ಯೂಲರ್ ಕಳುಹಿಸಿದ್ದೇವೆ. ಮೊದಲು ಭೂ ಸ್ವಾಧೀನಕ್ಕೆ ಹಣವನ್ನು ನಾವು ಎಲ್.ಓ.ಸಿ. ಮುಖಾಂತರ ಏನು ರಿಲೀಸ್ ಮಾಡುತ್ತೇವೆ. ಆದರಲ್ಲಿ ಪ್ರಾಥಮಿಕವಾಗಿ ಈ ಭೂಮಿಯನ್ನು ಕಳೆದುಕೊಂಡಿರುವವರಿಗೆ ಪರಿಹಾರವನ್ನು ಕೊಡಬೇಕೆಂದು ನಾವು ಸರ್ಕ್ಯೂಲರ್ ಅನ್ನು ಕೊಟ್ಟಿದ್ದೇವೆ. ಇದು ಹೆಚ್ಚು ಬಾಕಿ ಇಲ್ಲ, 15 ಕೋಟಿ ರೂಪಾಯಿಗಳ ಪೇಮೆಂಟ್ ಆಗಿದೆ, ಇನ್ನು ಬಾಕಿ 3 ಕೋಟಿ ರೂಪಾಯಿಗಳು ಪೇಮೆಂಟ್ ಇರುವಂಥಾದ್ದು ಅದನ್ನು ಆದಷ್ಟು ಬೇಗ ಕೊಡಿಸುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಭೂ ಸ್ವಾಧೀನ ಮಾಡಿರುವಂಥಾದ್ದು ಎಷ್ಟನೇ ಸಾಲಿನಿಂದ ಎಂಬುದನ್ನು ತಾವು ಹೇಳಬೇಕಾಗಿದೆ. ತಾವು ಹೇಳುವಂಥಾದ್ದು 1998ರಿಂದ ಇರುವಂಥಾದ್ದು ಬಾಕಿ ಎಂದು ಹೇಳುತ್ತಿದ್ದೀರಿ. ಇದಕ್ಕೆ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಪ್ರಾರಂಭವಾಗಿದ್ದು ಯಾವಾಗ? ನೀವು ಅದನ್ನು ಪರಿಶೀಲನೆಗೆ ತೆಗೆದುಕೊಂಡಿದ್ದು ಯಾವಾಗ? ಅಲ್ಲಿ ನೀವು ನಾಲೆಯನ್ನು ಪ್ರಾರಂಭ ಮಾಡಿದ್ದು ಯಾವಾಗ? ಇದುವರೆಗೆ ನೀವು ಅಲ್ಲಿರುವ ಹಾರ್ಟಿಕಲ್ಚರ್ ಕ್ರಾಪ್‌ಗೆ ಮತ್ತು ಸ್ಟ್ಯಾಂಡಿಂಗ್ ಕ್ರಾಪ್‌ಗೆ ಪರಿಹಾರವನ್ನು ಕೊಡದೇ ನೀವು ನಾಲೆ ಕೆಲಸವನ್ನು ತೆಗೆದುಕೊಂಡಿದ್ದು ಎಷ್ಟನೇ ವರ್ಷದಿಂದ ಪ್ರಾರಂಭವಾಗಿದೆ. ಅದಕ್ಕೆ ತಾವು ದಯಮಾಡಿ ಉತ್ತರವನ್ನು ಕೊಡಬೇಕು.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೆ, ದಿ: 23-4-1987ರಲ್ಲಿ ಭೂ ಸ್ವಾಧೀನಕ್ಕೆ ಪ್ರೊಸೀಡಿಂಗ್ಸ್ ಪ್ರಾರಂಭ ಆಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಅಂದರೆ 11 ವರ್ಷಗಳಾಗಿದೆಯಲ್ಲವೇ?

SRI K.N.NAGEGOWDA: I have told, we have paid Rs.15 crores. ನೀವು ಅದನ್ನೇ ಕೊಡಲಿಲ್ಲ, ಕೊಡಲಿಲ್ಲವೆಂದು ಹೇಳಿದರೆ ಹೇಗೆ? ಈ ಕೆಲಸ ಪ್ರಾರಂಭವಾದದ್ದು 1987ನೇ ಇಸವಿಯಿಂದ. ಇದಕ್ಕೆ 4(1) ಮತ್ತು 6(1) ನೋಟಿಫಿಕೇಷನ್ ಆಗಬೇಕು. 1987ರಿಂದ 15 ಕೋಟಿ ರೂಪಾಯಿಗಳನ್ನು ಕೊಟ್ಟುಕೊಂಡು ಬಂದಿದ್ದೇವೆ. ಇನ್ನು ಕೊಡಬೇಕಾಗಿರುವುದು 3ಕೋಟಿ ರೂಪಾಯಿಗಳ ಬಾಕಿ ಇದೆ. ಇನ್ನು 15 ವರ್ಷಗಳಿಂದ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ನಾವು ಅಕ್ವಿಜಿಷನ್‌ಗೆ ತೆಗೆದುಕೊಂಡು ಪ್ರೊಸೀಡಿಂಗ್ಸ್ ಮಾಡುವಂತಹ ಕೆಲಸವನ್ನು ಅಲ್ಲಿ ನಮ್ಮ ಲ್ಯಾಂಡ್ ಅಕ್ವಿಸಿಷನ್ ಆಫೀಸರ್ಸ್ ಮತ್ತು ಚೀಫ್ ಇಂಜಿನಿಯರ್ಸ್‌ಗಳು ಇರುತ್ತಾರೆ. ಇವರು ರೈತರಿಗೆ ಪರಿಹಾರವನ್ನು ಕೊಟ್ಟು ಕೊಂಡು ಬರುತ್ತಾರೆ. ಇದರಲ್ಲಿ ಯಾವುದೇ ತೊಂದರೆ ಇಲ್ಲ. ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಸ್ಪೆಸಿಫಿಕ್ ಆಗಿ ರೈತರಿಗೆ ಎಲ್ಲಿ ಈ ರೀತಿಯಾಗಿದೆ ಎಂದು ತಿಳಿಸಲಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಹೇಮಾವತಿ ನಾಲೆಯಲ್ಲಿ ರೈತರಿಗೆ ಕೊಡಬೇಕಾದ ಬಾಕಿ

ರೂ. 40 ಕೋಟಿ 1987ರಿಂದ ನಿಂತಿದೆ. ತಾವು ರೈತ ಕುಟುಂಬದಿಂದ ಬಂದಿರುವವರು, ಲ್ಯಾಂಡ್ ಅಕ್ವಿಸಿಷೆನ್ ಪ್ರೊಸೀಡಿಂಗ್ಸ್ 1987ರಲ್ಲಿ ಪ್ರಾರಂಭವಾಗಿರುವುದು, ಅವತ್ತಿನಿಂದ ಜಮೀನನ್ನು ನಿಮ್ಮ ಹೇಮಾವತಿಯವರಿಗೆ ಬಿಟ್ಟು, ನಿಮ್ಮ ನಾಲೆ ಕೆಲಸ ಮಾಡುವುದಕ್ಕೆ ಬಿಟ್ಟು, ಡಿಸ್ಟ್ರಿಬ್ಯೂಟರೀಸ್ ಮಾಡುವುದಕ್ಕೆ ಬಿಟ್ಟು, ನಾವೇನು ನಿಮ್ಮನ್ನು ಬೇಡಬೇಕೇ, ಈ ಹಣವನ್ನು ಪುಣ್ಯಕ್ಕೆ ಅಥವಾ ದಾನಕ್ಕೆ ಕೊಡುತ್ತೀರಾ? ಸ್ವಾಮಿ, ಯಾವುದೇ ನಿರ್ಣಯವನ್ನು ತೆಗೆದುಕೊಳ್ಳುವಾಗ ಅಕ್ವಿಸಿಷನ್ ಪ್ರೊಸೀಡಿಂಗ್ಸ್‌ಗೆ ಮೊದಲನೆಯ ಆದ್ಯತೆಯನ್ನು ಕೊಡಬೇಕು; ಅದಕ್ಕೆ ನಿಮ್ಮ ಬಜೆಟ್ ಪ್ರಾವಿಷನ್ ಕೇಳುವುದಿಲ್ಲ. ನನ್ನ ಜಮೀನನ್ನು ತೆಗೆದುಕೊಳ್ಳುತ್ತೀರೆಂದರೆ, ನನ್ನ ಜಮೀನಿಗೆ ಪರಿಹಾರ ಕೊಟ್ಟು ತೆಗೆದುಕೊಳ್ಳಿ ಎಂದು ರೈತರು ಸೌಜನ್ಯದಿಂದ ಕೇಳಿದರೆ, ಪರಿಹಾರ ಕೊಡುವುದಕ್ಕೆ ನೀವು ಹತ್ತು ಕೋಟಿ ಕೊಟ್ಟಿದ್ದೇವೆ ಎಂದು ಹೇಳಿದರೆ ನೀವೇನು ಕಂಟ್ರಾಕ್ಟರ್ ಬಿಲ್ ಕೊಟ್ಟಿದ್ದೀರಾ? ನಮ್ಮ ಜಮೀನಿಗೆ ಕೊಡುವ ಪರಿಹಾರ ಕೊಡುವುದನ್ನು ತಡ ಮಾಡಿದರೆ ಅದಕ್ಕೇನು 10 ವರ್ಷಕ್ಕೆ ಬಡ್ಡಿ ಹಾಕಿಕೊಡುತ್ತೀರಾ?

ಶ್ರೀ ಕೆ.ಎನ್.ನಾಗೇಗೌಡ: ಸರ್, ಆ ಭಾಷೆಯನ್ನು ನಾನೂ ಕೂಡ ಉಪಯೋಗಿಸಬಲ್ಲೆ, ಆದರೆ ನಾವು ಬಿಟ್ಟಿ ಕೊಡುತ್ತಿಲ್ಲ. ನಾವೂ ಕೂಡ ಕಾನೂನು ಪ್ರಕಾರ ಸ್ವಾಧೀನಪಡಿಸಿಕೊಂಡಿದ್ದೇವೆ; ಕಾನೂನಿನ ಪ್ರಕಾರವಾಗಿ ಅವರ ಹಣವನ್ನು ಕೊಟ್ಟಿದ್ದೇವೆ. ನಾನು ಹೇಳುತ್ತಿರುವುದು ನಲವತ್ತು ಕೋಟಿ ರೂಪಾಯಿಗಳಲ್ಲಿ ನಾವು ಈಗಾಗಲೇ 15 ಕೋಟಿ 47 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ, ಇನ್ನು ಕೊಡಬೇಕಾಗಿರುವುದು 3 ಕೋಟಿ 85 ಲಕ್ಷ ರೂಪಾಯಿಗಳು ಮಾತ್ರ. ಅವರು ನೀರಾವರಿಗಾಗಿ ರಾಷ್ಟ್ರಕ್ಕೆ ಜಮೀನನ್ನು ತ್ಯಾಗ ಮಾಡುವಂಥದ್ದು. ನೀರಾವರಿ ಹೆಚ್ಚಿಸಲು ನೀರನ್ನು ಕೊಡಿ ಎಂದು ಕೇಳುತ್ತೀರಿ, ಇಲ್ಲಿ ಭೂಸ್ವಾಧೀನಕ್ಕೆ ಹೋದರೆ ಸಮಸ್ಯೆ ಸೃಷ್ಟಿಸುತ್ತೀರಿ, ಎರಡೂ ಆಗುವುದಿಲ್ಲ. ಆದುದರಿಂದ ದಯವಿಟ್ಟು ತಾವು ತಡೆದುಕೊಳ್ಳಬೇಕು, ಖಂಡಿತವಾಗಿಯೂ ಭೂಮಿ ಕಳೆದುಕೊಂಡವರಿಗೆ ಮೊದಲ ಆದ್ಯತೆ ಮೇರೆಗೆ ಪರಿಹಾರ ಕೊಡುವುದನ್ನು ಸರ್ಕಾರದ ವತಿಯಿಂದ ಮಾಡುತ್ತೇವೆ. ನಮ್ಮ ರಾಜ್ಯ ಸರ್ಕಾರ ಹಣವನ್ನು ಮುದ್ರಣ ಮಾಡುವುದಿಲ್ಲ, ಸಂಪನ್ಮೂಲದ ಮೇಲೆ ಅವಲಂಬಿಸಿರುತ್ತದೆ, ಆ ಸಂಪನ್ಮೂಲದ ಮೇಲೆಯೇ ಪ್ರತಿಯೊಂದು ಆಯವ್ಯಯವಾಗಿರುತ್ತದೆ, ಆ ಆಯವ್ಯಯದಲ್ಲೆ ಇಟ್ಟುಕೊಂಡಿರುತ್ತೇವೆ, ಅದರಲ್ಲೆ ಆ ಭೂಸ್ವಾಧೀನ ಪರಿಹಾರವನ್ನು ಕೊಡಬೇಕು, ಭೂಸ್ವಾಧೀನಕ್ಕೆ ಪ್ರತ್ಯೇಕವಾಗಿ ಹಣವನ್ನು ಮುದ್ರಣ ಮಾಡುವುದಕ್ಕೆ ಬರುವುದಿಲ್ಲ. ದಯವಿಟ್ಟು ಅವರು ಕೂಡ ತಿಳುವಳಿಕೆಯುಳ್ಳವರು ಇದನ್ನು ಅರ್ಥ ಮಾಡಿಕೊಳ್ಳಲಿ, ನಾನು ಅದಷ್ಟು ಬೇಗ ಆ ಪರಿಹಾರವನ್ನು ಕೊಡಿಸುತ್ತೇನೆಂದು ಹೇಳುತ್ತಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಉಪಾಧ್ಯಕ್ಷರೆ, ನಾವು ತಿಳುವಳಿಕೆ ಇಲ್ಲದೆ ತೊಂದರೆ ಸೃಷ್ಟಿ ಮಾಡಿಲ್ಲ.